ವ್ಯಕ್ತಿಗಳ ಕೈಗೆ ಒಪ್ಪಿಸಬಾರದು.

ಎಲ್ಲವನ್ನೂ ಖಾಸಗೀಕರಣ ಮಾಡಬೇಕು ಎನ್ನುತ್ತಿರುವ ಈ ಕಾಲದಲ್ಲಿ ಕಾಲಜ್ಞಾನಿ ಬಾಬಾಸಾಹೇಬರ ಈ ಟಿಪ್ಪಣಿಯನ್ನು ನಾವು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಬ್ರಿಟಿಷ್ ಸರ್ಕಾರ ಆಡಳಿತವನ್ನು ಚಾರ್ಟರ್ ಮೂಲ ಈಸ್ಟ್ ಇಂಡಿಯಾ ಕಂಪನಿಗೆ ಕೊಟ್ಟಿದ್ದನ್ನು ನಾವು ಮರೆಯಬಾರದು. ಹಂತ ಹಂತವಾಗಿ ಖಾಸಗೀಕರಣಗೊಳ್ಳುತ್ತಿರುವ ಈ ಸಮಯದಲ್ಲಿ ಬಾಬಾಸಾಹೇಬರ ಮಾತುಗಳು ಪ್ರವಾದಿಯ ಮಾತುಗಳಂತೆ ಕಾಣುತ್ತವೆ. ಸರ್ಕಾರ ಯಾವ ದಿಕ್ಕಿನಲ್ಲಿ ಹೋಗಬಹುದು ಎನ್ನುವ ಸಾಧ್ಯತೆಯನ್ನು 75 ವರ್ಷಗಳ ಹಿಂದೆಯೇ ಬಾಬಾಸಾಹೇಬ್ ಗ್ರಹಿಸಿದ್ದರು. ಹೀಗಾಗಿಯೇ ಅವರು ಸ್ವಾತಂತ್ರ್ಯ ಮತ್ತು ಮುಕ್ತತೆಯನ್ನು ಭಿನ್ನವಾಗಿ ಪರಿಭಾಷಿಸಿದ್ದರು. ಕಾರಾಗೃಹದಲ್ಲಿಲ್ಲ ಎನ್ನುವ ಮಾತಾಗಲೀ, ವಾಕ್ ಸ್ವಾತಂತ್ರ್ಯವಿದೆ ಎನ್ನುವುದೇ ಮಾನವನ ಸ್ವಾತಂತ್ರ್ಯದ ಪ್ರತೀಕವಲ್ಲ. ಅದು ಸ್ವಾತಂತ್ರ್ಯದ ಸೀಮಿತ ಪರಿಭಾಷೆ. ಆರ್ಥಿಕ ಮತ್ತು ಸಾಮಾಜಿಕ ಹಕ್ಕುಗಳೂ ಒಳಗೊಳ್ಳಬೇಕಾದ ಸ್ವಾತಂತ್ರ್ಯದ ಪರಿಭಾಷೆಯನ್ನು ಬಾಬಾಸಾಹೇಬ್ ಪ್ರತಿನಿಧಿಸಿದ್ದರು. ಊಟಕ್ಕೆ ಗತಿಯಿಲ್ಲದ ಬಡವರು ಅನ್ನಕ್ಕಾಗಿ ತಮ್ಮ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟು ಅಮಾನವೀಯ ಪರಿಸ್ಥಿತಿಯಲ್ಲಿ ಕೆಲಸ ಮಾಡುವ ಹತಾಶೆಗೆ ಒಳಗಾಗುವುದನ್ನು ತಡೆಯಬೇಕಾದರೆ ಮುಕ್ತತೆ ಮತ್ತು ಸ್ವಾತಂತ್ರ್ಯಕ್ಕೆ ಇನ್ನೂ ವಿಸ್ತೃತವಾದ ವ್ಯಾಖ್ಯೆ ಬೇಕೆಂದು ವಾದಿಸಿದ್ದರು. ಎರಡು ತಿಂಗಳ ಹಿಂದೆ ಉಲ್ಲೇಖಿಸಿದ 'ಸಿಟ್ಟಿಲ್ಟ್' ಪುಸ್ತಕದಲ್ಲೂ ಸ್ವಾತಂತ್ರ್ಯದ ವ್ಯಾಖ್ಯೆ ಇದೇ ದಾರಿಯಲ್ಲಿದ್ದದ್ದನ್ನು ನಾವು ಕಂಡಿದ್ದೇವೆ.

ದಲಿತರಿಗೆ ಮತ್ತು ಅಲ್ಪಸಂಖ್ಯಾತರಿಗೆ ಯಾವ ರೀತಿಯ ಪ್ರಾತಿನಿಧ್ಯ ಇರಬೇಕು ಎನ್ನುವ ಬಗ್ಗೆ ಬಾಬಾಸಾಹೇಬರಿಗೂ ಮಹಾತ್ಮ ಗಾಂಧಿಗೂ ಇದ್ದ ಭಿನ್ನಮತದ ಚರ್ಚೆ ಸಾಕಷ್ಟು ಆಗಿದೆ. ಆದರೆ ಸೀಮಿತ ಸಮಯದವರೆಗೆ ಮಾತ್ರ ಆರಕ್ಷಣೆಯ ಹಕ್ಕುಗಳ ಮೂಲಕ ಈ ಪ್ರಾತಿನಿಧ್ಯ ಇರಬೇಕೆಂದು ಬಾಬಾಸಾಹೇಬ್ ಪ್ರತಿಪಾದಿಸಿದ್ದರು ಎನ್ನುವ ವ್ಯಾಪಕ ನಂಬಿಗೆಯಿದೆ. ಇದರ ಪದರಗಳನ್ನು ಅನುರಾಗ್ ಬಿಡಿಸಿ ಕೊಡುತ್ತಾರೆ. ಮಹಾತ್ಮರ ಜೊತೆ ಪೂನಾ ಒಪ್ಪಂದವಾದ ನಂತರ ದಲಿತರಿಗೆ ಭಿನ್ನ ಮತಕ್ಷೇತ್ರದ ಬೇಡಿಕೆಯನ್ನು ಕೈಬಿಟ್ಟು, ಆರಕ್ಷಿತ ಮತಕ್ಷೇತ್ರದ ಸೂತ್ರವನ್ನು ಒಪ್ಪಿದ್ದರು. ಆದರೆ, ಇದು ಕೇವಲ ಹತ್ತು ವರ್ಷಗಳಿಗೆ ಸೀಮಿತವಾಗಿರಬೇಕು ಎನ್ನುವ ಸಂವಿಧಾನ ಸಭೆಯ ಪ್ರಸ್ತಾಪವನ್ನು ಬಾಬಾಸಾಹೇಬರು ಒಪ್ಪಿದ್ದರು ಎನ್ನುವುದು ನಿಜವಲ್ಲ ಎಂದು ಅನುರಾಗ್ ಹೇಳುತ್ತಾರೆ. ಆ ಬಗ್ಗೆ ಅವರಿಗೆ ತೀವ್ರ ಪ್ರತಿರೋಧವಿತ್ತು. ಬಾಬಾಸಾಹೇಬರು ಈ ಬಗ್ಗೆ ಹಿಂದೆ ಮಾಡಿದ್ದ ಯೋಚನೆ ಪ್ರಕಾರ 25 ವರ್ಷಗಳ ಕಾಲಾವಧಿಯವರೆಗೆ ಆರಕ್ಷಣೆಯಲ್ಲಿ ಬದಲಾವಣೆಯ ಪ್ರಸ್ತಾಪವೇ ಬರಬಾರದು, ಆ ನಂತರ ಈ ಕಲಮನ್ನು ತಿದ್ದಬೇಕಾದರೆ ಆರು ತಿಂಗಳುಗಳ ನೋಟಿಸನ್ನು ಕೊಡಬೇಕು. ಹೀಗೆ ನೋಟಿಸು ಕೊಟ್ಟನಂತರ ಸಂಸತ್ತು ಅದನ್ನು ಪಾರಿತ ಮಾಡಿದ ಕೂಡಲೇ ಆ ಸಂಸತ್ತನ್ನು ಭಂಗಮಾಡಿ ಹೊಸ ಚುನಾವಣೆ ನಡೆಸಬೇಕು. ಹೊಸ ಸಂಸತ್ತಿನಲ್ಲಿ ಮತ್ತೊಮ್ಮೆ ಹಳೇ ಸಂಸತ್ತಿನ ಪ್ರಸ್ತಾವನೆ ಸಂಸತ್ತಿಗೆ ಚುನಾಯಿತರಾಗಿರುವ ದಲಿತ ಸಂಸದರ ಮೂರನೇ ಎರಡು ಭಾಗ ಮತ ಹಾಗೂ ಸಂಸತ್ತಿನಲ್ಲಿರುವ ಎಲ್ಲ ಜನಪ್ರತಿನಿಧಿಗಳಲ್ಲಿ ಮೂರನೇ ಎರಡು ಭಾಗದ ಬಹುಮತದಿಂದ ಪಾರಿತವಾದರೆ ಮಾತ್ರ ಇದನ್ನು ರದ್ದು ಮಾಡಬಹುದು ಎನ್ನುವ ಪ್ರಸ್ತಾಪವನ್ನು ಮಂಡಿಸಿದ್ದರು. ಹೀಗಾಗಿ ಹತ್ತು ವರ್ಷಗಳಿಗೆ ಮಾತ್ರ ಆರಕ್ಷಣೆ ಸೀಮಿತವಾಗಿರಬೇಕು ಎನ್ನುವುದು ಬಾಬಾಸಾಹೇಬರು ಒಪ್ಪಿದ ವಿಚಾರವಲ್ಲ ಎಂದು ಅನುರಾಗ್ ನಿರೂಪಿಸುತ್ತಾರೆ. ಹಾಗೆಯೇ ಈ ಆರಕ್ಷಣೆ ಕೇವಲ ಸಂಸತ್ತು ಮತ್ತು ಶಾಸನಸಭೆಗೆ ಮಾತ್ರ ಸೀಮಿತವಾಗಿತ್ತೇ ಹೊರತು, ವಿದ್ಯಾಸಂಸ್ಥೆಗಳಿಗೆ ಮತ್ತು ಸರ್ಕಾರಿ ನೌಕರಿಗಳಿಗೆ ಇದು ಅನ್ವಯಿಸುವುದಿಲ್ಲ ಎನ್ನುವುದನ್ನು ಅನುರಾಗ್ ಬಿಡಿಸಿ ಹೇಳುತ್ತಾರೆ.

ಸಂವಿಧಾನದ ರೂಪಕಲ್ಪನೆ ಮತ್ತು ಸಂರಚನೆಯಲ್ಲಿ ಬಾಬಾಸಾಹೇಬರು ಎಷ್ಟು ದೂರದರ್ಶಿತ್ವವನ್ನು ಹೊಂದಿದ್ದರು ಎನ್ನುವುದನ್ನು ಅವರ ಹಿಂದಿನ ಲೇಖನ ಮತ್ತು ಸಂವಿಧಾನ ಸಭೆಯಲ್ಲಿನ ನಿಲುವುಗಳ ಮೂಲಕ ಅನುರಾಗ್ ನಿರೂಪಿಸುತ್ತಾರೆ. ಬಾಬಾಸಾಹೇಬರ ಮನಸ್ಸು ಕಾನೂನಿನ ವಿಷಯದಲ್ಲಿ ಎಷ್ಟು ಪ್ರಖರವಾಗಿತ್ತು ಎನ್ನುವುದನ್ನು ಈ ಪುಸ್ತಕ ಎತ್ತಿ ತೋರಿಸುತ್ತದೆ. ಬಾಬಾಸಾಹೇಬರ ಬಗೆಗಿನ ಸಾಹಿತ್ಯಕ್ಕೆ ಇದೊಂದು ಮೌಲಿಕ ಕೊಡುಗೆಯಾಗಿದೆ. ●